ಶ್ರೀ ಜಿ. ಪುಟ್ಟಸ್ವಾಮಿಗೌಡ.—ಇದು ರಾಷ್ಟ್ರೀಯ ಹೆದ್ದಾರಿ ಯೋಜನೆಯಲ್ಲಿ ತೆಗೆದುಕೊಂಡಿರುವ ತಕ್ಕ ಒಂದು ಕಾರ್ಯಕ್ರಮ. ಇದಕ್ಕೆ ರಾಜ್ಯ ಸರ್ಕಾರದ ಹಣದ ಕೊರತೆ ಏನೂ ಇಲ್ಲ. ೩೦ ಕಿಲೋ ಮೀಟರ್ ಉದ್ದದ ಬೈಪಾಸ್ ರಸ್ತೆಯನ್ನು ಮಾಡತಕ್ಕದ್ದಕ್ಕೆ ಎರಡು ಹಂತಗಳನ್ನು ಮಾಡಿದ್ದಾರೆ. ಮೊದಲನೇ ಹಂತದಲ್ಲಿ ೧೭ ಕಿಲೋ ಮೀಟರ್ ಮತ್ತು ಎರಡನೇ ಹಂತದಲ್ಲಿ ೧೩ ಕಿಲೋ ಮೀಟರ್ ಮಾಡತಕ್ಕದ್ದು. ಮೊದಲನೆಯ ಹಂತದ ೧೭ ಕಿಲೋ ಮೀಟರ್ ಮಾಡತಕ್ಕದ್ದಕ್ಕೆ ಈ ವರ್ಷ ನಮ್ಮ ಆಯವ್ಯಯದಲ್ಲಿ ಎರಡು ನೂರು ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೇವೆ. ಇದು ಹೆಚ್ಚು ಆದರೂ ಕೂಡ ರೀ-ಅಪ್ರೋಪಿಯೇಟ್ ಮಾಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ೧೭ ಕಿಲೋ ಮೀಟರ್ ಅನ್ನು ಸ್ಟಿಪ್ಪುಲೇಟೆಡ್ ಟೈಮ್‌ನಲ್ಲಿ ಮಾಡತಕ್ಕದ್ದು ಅಂದರೆ ೧೯೯೧ನೇ ಇಸವಿಯಲ್ಲಿ ಪೂರ್ತಿ ಮಾಡಲು ನಾವು ಎಲ್ಲಾ ರೀತಿಯ ಹಣ ಒದಗಿಸತಕ್ಕದ್ದಕ್ಕೆ ಮತ್ತು ಕೆಲಸ ಮಾಡತಕ್ಕದ್ದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುತ್ತೇನೆ. ಮತ್ತು ಎರಡನೇ ಹಂತವನ್ನು ಇದು ಮುಗಿದ ನಂತರ ತೆಗೆದುಕೊಳ್ಳತಕ್ಕ ಕಾರ್ಯಕ್ರಮ ಮಾಡುತ್ತೇವೆ. ಈಗಾಗಲೇ ಎರಡನೇ ಹಂತಕ್ಕೆ ರಾಜ್ಯದ ಹೆದ್ದಾರಿ ಏನು ಇದೆ, ಅದರ ಬಗ್ಗೆ ವಿನ್ಯಾಸ ಮತ್ತು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕೂಡ ಕಳಿಸಿದ್ದೇವೆ. ಅದು ಬಂದ ನಂತರ ಮತ್ತು ಇದು ಮುಗಿದ ನಂತರ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಪಿ. ಸಿ. ಸಿದ್ದನಗೌಡ.—ಮಾನ್ಯ ಅಧ್ಯಕ್ಷರೇ, ಮೊದಲನೇ ಹಂತದ ಕಾರ್ಯಕ್ರಮದ ಬಗ್ಗೆ ಮಾನ್ಯ ಸಚಿವರು ಸ್ಥಳಕ್ಕೆ ಬೇಟಿ ಕೊಟ್ಟು ನೋಡಬೇಕು. ಎರಡನೆ ಹಂತದ್ದು ತೀವ್ರ ಗತಿಯಲ್ಲಿ ಆಗಬೇಕೆಂದು ಕೇಂದ್ರ ಸರ್ಕಾರದಲ್ಲಿದ್ದರೂ ಕೂಡ ಹುಬ್ಬಳ್ಳಿ-ಧಾರವಾಡ ಬೈಪಾಸ್ ರೋಡ್ ಕೆಲಸ ಬೇಗ ಮುಗಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ನಾನು ಈ ಸ್ಥಳಕ್ಕೆ ಹೋಗಿದ್ದೇನೆ, ಪರಿಶೀಲನೆ, ಮಾಡಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ಏನು ಇದೆ, ಅದರಂತೆ ಆದಷ್ಟು ಬೇಗ ಅದನ್ನು ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಜಪಾನ್ ಯೋಜನೆಯಿಂದ ಹಾಸನ ಜಿಲ್ಲೆಗೆ ಸೌಕರ್ಯ

೧೨೧೯. ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಯೋಜನೆ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಜಪಾನ್ ಯೋಜನೆಯಲ್ಲಿ ಹಾಸನ ಜಿಲ್ಲೆ ಅಭಿವೃದ್ಧಿಗೆ ನಿಗದಿಪಡಿಸಿರುವ ವೆಚ್ಚ ವೆಷ್ಟು ? ಅಂತು ಯಾವ ಯಾವ ಯೋಜನೆಗೆ ವೆಷ್ಟೆಷ್ಟು ಹಣ ನಿಗದಿಪಡಿಸಲಾಗಿದೆ ?

(ಆ) ಹಾಸನ ತಾಲ್ಲೂಕಿನ ದೊಡ್ಡ ಗದ್ದವಳ್ಳಿ, ಹರಿಹರಪುರ ಮತ್ತು ಕೋರಮಂಗಲ ಗ್ರಾಮಾಂತರ ಪ್ರದೇಶದಲ್ಲಿ ಹೊಯ್ಸಳ ದೇವಸ್ಥಾನಗಳ ಅಭಿವೃದ್ಧಿಗೆ ಈ ಯೋಜನೆಯಿಂದ ಏನಾದರೂ ಸಹಾಯ ದೊರೆಯುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—(ಯೋಜನೆ, ಕಾನೂನು, ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).

(ಅ) ಈ ಬಗ್ಗೆ ಅಂತಿಮ ನಿರ್ಣಯವಾಗಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಶಿವರಾಮು.—ಮಾನ್ಯ ಅಧ್ಯಕ್ಷರೇ, ಉತ್ತರ ಒದಗಿಸಿರುವುದನ್ನು ನೋಡಿದರೆ ನನಗೆ ಇನ್ನೊಂದು ಪ್ರಶ್ನೆ ಕೇಳತಕ್ಕ ಅವಶ್ಯಕತೆ ಇಲ್ಲ ಎಂದು ಕಾಣಿಸುತ್ತದೆ. ಆದರೆ ಜಿಲ್ಲಾ ಮಂತ್ರಿಗಳು ನಮ್ಮ ಹಳೇಬೀಡಿನ ಕಾರ್ಯಕ್ರಮದಲ್ಲಿ ಒಂದು ಸಲ ಭಾಗವಹಿಸಿದ್ದ ಕಾಲದಲ್ಲಿ ಟೂರಿಸಂ ಡೆವಲಪ್‌ಮೆಂಟ್ ಒಗ್ಗೆ ಹಣವನ್ನು ಕೊಡತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಅಷ್ಟರೊಳಗೆ ಜಪಾನ್ ಸ್ಕೀಮ್‌ನಲ್ಲಿ ೧೪೦ ಕೋಟಿ ರೂಪಾಯಿ ಒದಗಿಸಿತ್ತು ಎಂದು ತಿಳಿದುಬಂತು. ಆದರೆ ಯಾವುದೇ ಒಂದು ಸ್ಕೀಮ್‌ನಲ್ಲಿ ಹಣ ಒದಗಿಸಬೇಕಾದರೆ ಒಂದು ಪ್ಲಾನ್ ಅಥವಾ ಪ್ರೊಪೋಸಲ್ ಕೊಡದೆ ಒದಗಿಸುವುದಿಲ್ಲ ಎನ್ನುವ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಈ ಒಂದು ಪ್ರಶ್ನೆಯನ್ನು ಏತಕ್ಕೆ ಕೇಳುತ್ತಿದ್ದೇನೆ ಅಂದರೆ, ಜಿಲ್ಲಾ ಪರಿಷತ್ತಿಗೆ ಯಾವಾಗ ರೋಡ್ ಅನ್ನು ಇಂಪ್ರೂವ್ ಮಾಡಬೇಕು ಎಂಬ ಬಗ್ಗೆ ಪ್ರೊಪೋಸಲ್ ಕಳಿಸಿ ಎಂದು ಕೇಳಿದ್ದಾರೆ. ಅದೇರೀತಿ ಲೋಕೋಪಯೋಗಿ ಇಲಾಖೆಯವರನ್ನು ಸಹ ಕೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಪ್ಲಾನ್ ಅಂಡ್ ಎಸ್ಟಿಮೇಟ್ ಕೂಡ ಹಾಸನ್‌ನಿಂದ

ಬೇಲೂರಿಗೆ ರೋಡ್ ಇಂಪ್ರೂವ್‌ಮೆಂಟ್‌ಗೆ ಪ್ರೊಪೋಸಲ್ ಕಳಿಸಿದ್ದಾರೆ. ನನ್ನ ದೃಷ್ಟಿಯಲ್ಲಿ ಅವರು ಕಳಿಸಿರತಕ್ಕ ರೋಡ್ ಅವಶ್ಯಕತೆ ಇರಲಿಲ್ಲವೆಂದು ಕಾಣುತ್ತದೆ. ಏಕೆಂದರೆ ಈಗ ಇರತಕ್ಕ ರೋಡ್ ನ್ಯಾಷನಲ್ ಹೈ ವೇಗಿಂತ ಚೆನ್ನಾಗಿ ಇದೆ : ಹಳೇಬೀಡು ಬೇಲೂರಿಗೆ ಹೋಗಲು ಬೇರೆ ಒಂದು ಹತ್ತಿರದ ಮಾರ್ಗವಿದೆ. ಇಂತಹ ರೋಡ್‌ಗಳನ್ನು ಈ ಯೋಜನೆಯಲ್ಲಿ ತೆಗೆದುಕೊಳ್ಳುತ್ತಾರೆಂಬ ದೃಷ್ಟಿಯಿಂದ ನಾನು ಮಂತ್ರಿಗಳಿಗೆ ಈ ಪ್ರಶ್ನೆಯನ್ನು ಕೇಳಿಸಿದ್ದೆ. ಇಲ್ಲಿ ನನ್ನ ಎರಡನೆಯ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈಗ ಹಳೇಬೀಡಿನ ದೇವಸ್ಥಾನ ಆಗುವುದಕ್ಕೆ ಮುಂಚೆ ದೊಡ್ಡ ಗದ್ದಹಳ್ಳಿ, ಹರಿಹರಪುರ ಮತ್ತು ಕೋರಮಂಗಲ ಗ್ರಾಮಾಂತರ ಪ್ರದೇಶದಲ್ಲಿ ದೇವಸ್ಥಾನಗಳು ಬಹಳಷ್ಟು ಮುಂಚೆ ಕಟ್ಟಲ್ಪಟ್ಟಲಾಗಿದ್ದು ಅದನ್ನು ಸ್ಟೇಟ್ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ ನವರು ಬಹಳಷ್ಟು ಚೆನ್ನಾಗಿಉತ್ತಮವಾಗಿ ಇಂಪ್ರೂವ್ ಮಾಡಿದ್ದಾರೆ. ಒಂದು ತೊಂದರೆ ಏನು ಇದೆ ಅಂದರೆ, ಅಲ್ಲಿಗೆ ಕಮ್ಯುನಿಕೇಷನ್ ಇಲ್ಲ. ರೋಡ್ ಇಂಪ್ರೂವ್‌ಮೆಂಟ್ ಎನೇನೂ ಆಗಿಲ್ಲ. ಬಹಳ ದುಸ್ಥಿತಿಯಲ್ಲಿದ್ದಾವೆ. ಬಹಳಷ್ಟು ಜನ ಟೂರಿಸ್ಟ್‌ಗಳು ಆ ಪ್ರದೇಶವನ್ನು ನೋಡಬೇಕು ಎಂದು ಟೂರಿಸ್ಟ್ ಡಿಪಾರ್ಟ್‌ಮೆಂಟ್‌ನವರಿಂದ ತಿಳಿದುಕೊಂಡು ಬಂದಿದ್ದರೂ ಕೂಡ ಆ ಜಾಗಕ್ಕೆ ಭೇಟಿ ಮಾಡುವುದಕ್ಕೆ ಬಹಳತೊ ದರೆ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ ಬಹಳಷ್ಟು ಜನ ಅಲ್ಲಿಗೆ ಬಂದು ವಾಪಸ್ ಹೋಗಿದ್ದಾರೆ. ಅಲ್ಲಿಗೆ ಹೋಗಲು ರೋಡ್ ಅನ್ನು ಅಟ್‌ಲೀಸ್ಟ್ ಈ ಯೋಜನೆಯಲ್ಲಿ ಹಣ ಒದಗಿದರೆ ಇಂಪ್ರೂವ್ ಆಗುತ್ತದೆ ಎಂಬ ದೃಷ್ಟಿಯಿಂದ ನಾನು ಪ್ರಶ್ನೆ ಕೇಳಿದ್ದೆ. ಆದರೆ ಉತ್ತರ ನನಗೆ ಸರಿಯಾದ ರೀತಿಯಲ್ಲಿ ಒದಗಿಸಿಲ್ಲ. ಮಾನ್ಯ ಮಂತ್ರಿಗಳು ಹಳೇಬೀಡಿಗೆ ಬಂದಾಗ ಕೆಲವನ್ನು ಹೇಳಿದ್ದರು. ಬಹುಶಃ ಇದರ ಬಗ್ಗೆ ಸೂಕ್ತವಾದ ಉತ್ತರವನ್ನು ಒದಗಿಸುತ್ತಾರೆ ಎಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಜಪಾನ್ ಮಾದರಿ ಯೋಜನೆಯಲ್ಲಿ ಹಾಸನ ಜಿಲ್ಲೆಯ ಅಭಿವೃದ್ಧಿಗೆ ನಿಗಧಿ ಪಡಿಸಿರುವ ಮೆಚ್ಚ ಎಷ್ಟು ಎಂದು ಕೇಳಿದ್ದಾರೆ. ಅವರು ನಿರ್ದಿಷ್ಟ ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ''ಈ ಬಗ್ಗೆ ಅಂತಿಮ ನಿರ್ಣಯವಾಗಿಲ್ಲವೆಂದು'' ಉತ್ತರ ಕೊಟ್ಟಿದ್ದೇವೆ. ಪ್ರವಾಸೋದ್ಯಮವನ್ನು ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿಗೊಳಿಸುವ ಈ ಯೋಜನೆಯನ್ನು ಕ್ಯಾಬಿನೆಟ್‌ನಲ್ಲಿ ತತ್ವಶಃ ಒಪ್ಪಿ ಆ ಸಂಸ್ಥೆಗೆ ಕಳಿಸಿದ್ದೇವೆ. ಕಳುಹಿಸಿದ ಮೇಲೆ ೨-೩ ಸಾರಿ ಅದಕ್ಕೆ ಸಂಬಂಧಪಟ್ಟ ಜಪಾನಿನ ಬೇರೆ ಬೇರೆ ಪ್ರವಾಸೋದ್ಯಮದ ವಿಭಾಗದವರು, ಸಾಗರೋತ್ತರ ಹಣಕಾಸಿನ ಸಂಸ್ಥೆಯ ಪ್ರತಿನಿಧಿಗಳು ಮೂರು ಸಾರಿ ಕರ್ನಾಟಕ ರಾಜ್ಯದಲ್ಲೆಲ್ಲಾ ಸುತ್ತಾಡಿ ನಮ್ಮ ಯೋಜನೆಯನ್ನು ಪರಿಶೀಲನೆ ಮಾಡಿದ್ದಾರೆ. ಅಲ್ಲದೆ ಈ ಯೋಜನೆ ಬೇರೆ ಬೇರೆ ಹಂತದಲ್ಲಿ ಪರಿಶೀಲನೆಯಲ್ಲಿದೆ. ಈಗ ಪುನಃ ಅವರು ಎಲ್ಲವನ್ನು ನೋಡಿದಮೇಲೆ ಇದರ ಬಗ್ಗೆ ಕೆಲವು ಮಾರ್ಪಾಡು ಆಗಬೇಕು. ಕೆಲವು ಯೋಜನೆಗಳನ್ನು ಸೇರಿಸಬೇಕು, ಕೆಲವು ಯೋಜನೆಗಳನ್ನು ಕೈಬಿಡಬೇಕೆಂದು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಸೂಚನೆಗಳನ್ನು ನಾವು ಪುನಃ ಸಂಬಂಧಪಟ್ಟ ಪರಿಣಿತರೊಂದಿಗೆ ಚರ್ಚಿಸಿ ಅವರಿಗೆ ಕಳುಹಿಸಿದ ಮೇಲೆ ಅಂತಿಮವಾದ ಒಂದು ಮಂಜೂರಾತಿಯನ್ನು ಕೊಡುತ್ತಾರೆ. ಅಂತಿಮವಾದ ಮಂಜೂರಾತಿ ಕೊಡದೆ ಅದರ ವಿವರಗಳನ್ನು ಈಗ ಹೇಳಲು ಸಾಧ್ಯವಿಲ್ಲ. ಕೊನೆ ಗಳಿಗೆಯಲ್ಲಿ ಅವರು ಕೆಲವು ಯೋಜನೆಗಳನ್ನು ಕೈಬಿಡಬೇಕೆಂದು ಹೇಳಿ ನಾವು ಇಲ್ಲಿ ಮಾಡುತ್ತೇವೆಂದು ಹೇಳಿ ಆಶ್ವಾಸನೆಯನ್ನು ಕೊಟ್ಟರೆ I will be bauled up for privilege. ಆದ್ದರಿಂದ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಭರವಸೆ ಕೊಡುವ ಹಂತದಲ್ಲಿ ನಾವಿಲ್ಲ. ಕೇಂದ್ರ ಸರ್ಕಾರದವರು ಕೂಡ ಬೇಲೂರಿನಲ್ಲಿ ೨೬ ಲಕ್ಷ ರೂಪಾಯಿಗಳಲ್ಲಿ ಒಂದು ಡಾರ್ಮಿಟರಿ ಮತ್ತು ೨೫ ಕೋಣೆಗಳನ್ನು ಕಟ್ಟತಕ್ಕ ಕಾರ್ಯಕ್ರಮದ ಬಗ್ಗೆ ಫಸ್ಟ್ ಅಂಡ್ ಸೆಕೆಂಡ್ ಫೇಸ್‌ನಲ್ಲಿ ತೆಗೆದುಕೊಳ್ಳಲು ಈಗಾಗಲೇ ಟೆಂಡರನ್ನು ಕರೆದಿದ್ದಾರೆ. ಆ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಸನ್ಮಾನ್ಯ ಸದಸ್ಯರು ಒಂದು ವಿಚಾರ ಹೇಳಿದರು. ಏನೆಂದರೆ ಅಲ್ಲಿ ಅತ್ಯಂತ ಪಕ್ಕದಲ್ಲಿರುವ ಸಂಬಂಧಪಟ್ಟ ದೇವಸ್ಥಾನಗಳ ಜೀರ್ಣೋದ್ಧಾರ ಹಾಗೂ ಸಂರಕ್ಷಣೆಯನ್ನು ನಾವು ಮಾಡಬೇಕು ಎಂದು ಇದರಲ್ಲಿ ಕೆಲವನ್ನು ಪ್ರವಾಸೋದ್ಯಮ ಇಲಾಖೆ ತೆಗೆದುಕೊಳ್ಳುತ್ತದೆ. ಮತ್ತೆ ಕೆಲವು ದೇವಸ್ಥಾನಗಳ ಜೀರ್ಣೋದ್ಧಾರ ಪ್ರಾಚ್ಯ ಸಂರಕ್ಷಣಾ ಇಲಾಖೆಗೆ ಬರುತ್ತದೆ. ಅದನ್ನು ಅವರು ತೆಗೆದು ಕೊಳ್ಳುತ್ತಾರೆ. ಈಗ ಬೇಲೂರು ಮತ್ತು ಹಳೇಬೀಡು ಏನಿದೆ. ಈ ಸ್ಥಳಗಳಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವ ಪರಿಸರ ಮಾಡಬೇಕು, ಅದಕ್ಕೆ ನಮ್ಮ ಮನಸ್ಸು ಕೇಂದ್ರೀಕೃತವಾಗಿದೆ. ಉಳಿದ ವಿಭಾಗಗಳ ಬಗ್ಗೆ ಪ್ರಾಚ್ಯ ಸಂಶೋಧನಾ ಇಲಾಖೆಯವರಿಗೆ ಹೇಳಿ ಅಲ್ಲಿ ಏನೂ ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡಿಸಲಾಗುತ್ತದೆ.

ಶ್ರೀ ಬಿ. ಶಿವರಾಮು.—ಕನಿಷ್ಟ ಹಾಸನ ಜಿಲ್ಲೆಯಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಿಕೊಳ್ಳಲು ವಿಚಾರ ಮಾಡಿದ್ದೀರಿ, ಎನ್ನತಕ್ಕದ್ದರ ಬಗ್ಗೆ ಹೇಳುತ್ತೀರಾ ?

ಅಧ್ಯಕ್ಷರು.—ಅವರ ಡಿಮ್ಯಾಂಡ್ ನಾಳೆ ಅಥವಾ ನಾಡಿದ್ದು ಬರುತ್ತದೆ, ಆಗ ಅದರ ಬಗ್ಗೆ ಹೇಳಿ.